## ಎರಡನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ರಾಯಚೂರು.

**ಸ್ಪೇಷಲ್ ಕೇಸ್ ನಂ : 132/2017**

**ಚಾ.ಸಾ : 1 ಪ್ರಾ.ಸಾ : 1**

**ಸಾಕ್ಷಿಯನ್ನು ಪ್ರಮಾಣೀಕರಿಸಿದ ದಿನಾಂಕ : 18.06.2022**

| | | |
|---|---|---|
| ಸಾಕ್ಷಿಯ ಹೆಸರು | : | ಅಲ್ಲಾಬಕ್ಷ |
| ತಂದೆಯ/ಗಂಡನ ಹೆಸರು | : | ರಾಜಾಸಾಬ್ ಬನ್ನೆಟ್ಟಿ |
| ವಯಸ್ಸು | : | 41 ವರ್ಷ |
| ಉದ್ಯೋಗ | : | ಕಿರಿಯ ಅಭಿಯಂತರರು, ಪಿ.ಆರ್.ಇ.ಡಿ, ಉಪವಿಭಾಗ ದೇವದುರ್ಗ |
| ವಿಳಾಸ | : | ದೇವದುರ್ಗ |

**ಮುಖ್ಯ ವಿಚಾರಣೆ : ಮಾನ್ಯ ಸರ್ಕಾರಿ ವಿಶೇಷ ಅಭಿಯೋಜಕರಿಂದ**

ದಿ. 10.02.2010 ರಿಂದ ಇಲ್ಲಿಯವರೆಗೆ ಪಿ.ಆರ್.ಇ.ಡಿ, ಉಪವಿಭಾಗ ದೇವದುರ್ಗದಲ್ಲಿ ಕಿರಿಯ ಅಭಿಯಂತರರು ಎಂದು ಕರ್ತವ್ಯ ನಿರ್ವಹಿಸುತ್ತಾ ಬಂದಿರುತ್ತೇನೆ.

ದಿ. 08.09.2015 ರಂದು ಪಂಚನಾಮೆ ಮಾಡುವ ಕಾಲಕ್ಕೆ ಹೀರೆಬೂದೂರು ಗ್ರಾಮ ಪಂಚಾಯತಿ ಹಂಚಿನಾಳದಲ್ಲಿ ಸದರಿ ಪಂಚನಾಮೆಗೆ ನನ್ನ ಸಹಿಯನ್ನು ಮಾಡಿರುತ್ತೇನೆ. ಸದರಿ ಪಂಚನಾಮೆಯಲ್ಲಿರುವ ಪುಟ 1 ರಿಂದ 4 ರಲ್ಲಿರುವ ತನ್ನ ಸಹಿಗಳನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಸದರಿ ಸ್ಥಳ ಪರೀಶಿಲನಾ ಪಂಚನಾಮೆಯನ್ನು ನಿ.ಪಿ-1 ಎಂದು, ಸಾಕ್ಷಿ ಸಹಿಗಳನ್ನು ನಿ.ಪಿ-1(ಎ) ರಿಂದ (ಡಿ) ಎಂದು ಗುರುತಿಸಲಾಯಿತು.

ನಂತರ ಚಾ.ಸಾ-37 ಲೋಕಾಯುಕ್ತ ಪೋಲಿಸರ ಕರೆಯ ಮೇರೆಗೆ ದೇವದುರ್ಗದ ಪ್ರವಾಸಿ ಮಂದಿರಕ್ಕೆ ಹೋಗಿರುತ್ತೇನೆ. ನನ್ನ ಜೊತೆಗೆ ಬಸಲಿಂಗಪ್ಪ ಎನ್ನುವವರು ಇದ್ದರು, ಅವರು ಸಹ ಪಂಚರಾಗಿ ಬಂದಿದ್ದರು. ನಂತರ ನನಗೆ ಚಾ.ಸಾ-37 ರವರು ಹೀರೆಬೂದೂರು ಗ್ರಾಮ ಪಂಚಾಯತಿಯ ಹಂಚಿನಾಳ ಗ್ರಾಮದಲ್ಲಿ ಆಶ್ರಯ ಕಾಲೋನಿಯ ಲೇಔಟನಲ್ಲಿ ರಸ್ತೆ ಅಭಿವೃದ್ಧಿ ಮತ್ತು ಕಾಮಗಾರಿ ಮಾಡುವಾಗ ನ್ಯೂನ್ಯತೆ ಕಂಡು ಬಂದಿದ್ದರ ಬಗ್ಗೆ ಸಿ ಆಂಡ್ ಎ.ಸಿ ರವರು ಮಾಡಿದ ಆಡಿಟ್ನಲ್ಲಿ ಕಂಡು ಬಂದಿರುತ್ತದೆ ಎಂದು ಹೇಳಿದರು. ನಂತರ ನನಗೆ ಆರೋಪಿ ನಂ. 1 ಇವರನ್ನು ಭೇಟಿ ಮಾಡಿಸಿ, ಇವರು ಸದರಿ ಹಿರೇಬೂದೂರು ಗ್ರಾಮ ಪಂಚಾಯತಿಯಲ್ಲಿ ಸೆಕ್ರೇಟರಿ ಎಂದು ಕೆಲಸ ಮಾಡುತ್ತಿದ್ದರು ಎಂದು ಹೇಳಿದರು. ನಂತರ ಲೋಕಾಯುಕ್ತ ಪೋಲಿಸರು ನನ್ನನ್ನು ಮತ್ತು ಚಾ.ಸಾ-2 ರವರನ್ನು ಹಾಗೂ ಆರೋಪಿ ನಂ. 1, ಚಾ.ಸಾ-40 ಗೌಸುದ್ದಿನ್ ಮತ್ತು ಹಂಚಿನಾಳ ಗ್ರಾಮಕ್ಕೆ ಜೀಪಿನಲ್ಲಿ ಕರೆದುಕೊಂಡು ಹೋದರು. ಹಂಚಿನಾಳ ಗ್ರಾಮದಲ್ಲಿ ಶಿವರಾಜಪ್ಪ ತಂದೆ ಬಸನಗೌಡ ಇವರ

ಹೊಲಕ್ಕೆ ಹೋಗಿರುತ್ತೇವೆ. ಸದರಿ ಹೊಲದಲ್ಲಿ ಆಶ್ರಯ ಕಾಲೋನಿಯ ಅಭಿವೃದ್ದಿಪಡಿಸುವ ಕಾಮಗಾರಿ ಕೆಲಸ ನಡೆಸಲಾಗಿತ್ತು. ಸದರಿ ಅಭಿವೃದ್ದಿಪಡಿಸುವ ಕಾಮಗಾರಿ ರಸ್ತೆ ಮತ್ತು ಮಣ್ಣಿನ ಚರಂಡಿ ಮಾಡುವುದು. ನಂತರ ಲೋಕಾಯುಕ್ತ ಇನ್ಸಪೇಕ್ಟರ್ ಇವರು ಹೀರೆಬೂದೂರು ಗ್ರಾಮ ಪಿ.ಡಿ.ಓ ರವರಿಗೆ ಕಡತಗಳನ್ನು ಹಾಜರುಪಡಿಸಲು ಹೇಳಿದರು, ಅವರ ಈ ಮೊದಲು ಸೆಕ್ರೇಟರಿ ಆದ ಆರೋಪಿ ನಂ. 1 ಇವರು ನನಗೆ ಯಾವುದೇ ಈ ಸಂಬಂಧ ಯಾವುದೇ ಚಾರ್ಜ ಕೊಟ್ಟಿಲ್ಲ ಮತ್ತು ನನ್ನ ಬಳಿ ಕಡತಗಳು ಇರುವುದಿಲ್ಲ ಎಂದು ಹೇಳಿದರು. ನಂತರ ಆರೋಪಿ ನಂ. 1 ಇವರು ಎರಡು ಕಡತಗಳನ್ನು ಲೋಕಾಯುಕ್ತ ಸಿ.ಪಿ.ಐ ರವರಿಗೆ ಕೊಟ್ಟಿರುತ್ತಾರೆ.

ನಂತರ ಎರಡು ಕಡತಗಳನ್ನು ಚಾ.ಸಾ-40 ರವರಿಗೆ ಪರಿಶೀಲನೆಗಾಗಿ ಕೊಡಲಾಯಿತು. ನಂತರ ಅವರು ಪರಿಶೀಲನೆಯನ್ನು ಮಾಡಿ ಕಾಮಗಾರಿಗೆ ಸಂಬಂಧಪಟ್ಟ ರಸ್ತೆ ಮತ್ತು ಚರಂಡಿ ಇವುಗಳ ಕಾವಗಾರಿ ಎಷ್ಟು ಅಗಿರುತ್ತದೆ ಎಂದು ಅಳತೆ ತೆಗೆದುಕೊಂಡಿರುತ್ತಾರೆ. ಅಲ್ಲಿ ಒಂದು ಮುಖ್ಯ ರಸ್ತೆ 150 ಮೀಟರ ಉದ್ದ ಕಾಮಗಾರಿ ಕೆಲಸ ಮಾಡಲಾಗಿತ್ತು. 24 ಮೀಟರನ ಮೂರು ಅಡ್ಡ ರಸ್ತೆಗಳ ಕಾಮಗಾರಿಯನ್ನು ಮಾಡಿದ್ದರು. 16 ಮೀಟರ ನ ಒಂದು ಅಡ್ಡ ರಸ್ತೆಯ ಕಾಮಗಾರಿಯನ್ನು ಮಾಡಿದ್ದರು. ಈ ರೀತಿ ಒಟ್ಟು 238 ಮೀಟರ ಉದ್ದಳತೆಯ ರಸ್ತೆ ಕಾಮಗಾರಿಯನ್ನು ಮಾಡಿದ್ದರು ಎಂದು ಚಾ.ಸಾ-40 ರವರು ತಿಳಿಸಿದರು. ಸದರಿ ಮೇಲೆ ಹೇಳಿದ ಎಲ್ಲ ಕಾಮಗಾರಿ ಕೆಲಸ ಮಾಡಿದ ಬಗ್ಗೆ ನಮ್ಮ ಸಮಕ್ಷಮ ಪರಿಶೀಲನೆ ಮಾಡಿರುತ್ತಾರೆ. ನಂತರ ಚಾ.ಸಾ-40 ರವರು ಚಾ.ಸಾ-37 ರವರಿಗೆ ಅಳತೆ ಪುಸ್ತಕಗಳು ಕಡತದಲ್ಲಿ ಇರುವುದಿಲ್ಲ ಎಂದು ಹೇಳಿದರು. ನಂತರ ಅಳತೆ ಪುಸ್ತಕಗಳನ್ನು ಕೊಡಬೇಕು ಎಂದು ಚಾ.ಸಾ-37 ರವರು ಆರೋಪಿ ನಂ. 1 ರವರಿಗೆ ಕೇಳಿದಾಗ, ನಂತರ ಒದಗಿಸುತ್ತೇನೆ ಎಂದು ಹೇಳಿರುತ್ತಾರೆ. ಸದರಿ ಆಶ್ರಯ ಕಾಲೋನಿಯ ಪೂರ್ವಕ್ಕೆ ಶಿವರಾಜಪ್ಪಗೌಡ ಬಸನಗೌಡ ಇವರ ಹೊಲ, ಪಶ್ಚಿಮಕ್ಕೆ ಸುಂಕೇಶ್ವರಹಾಳದಿಂದ ಸಾವಂತಗೇರ ಗ್ರಾಮಕ್ಕೆ ಹೋಗುವ ರಸ್ತೆ, ಉತ್ತರಕ್ಕೆ ರೆಡ್ಡಪ್ಪಗೌಡ ಹೊಸಮನಿ ಇವರ ಹೊಲ ಮತ್ತು ದಕ್ಷಿಣಕ್ಕೆ ಶಿವರಾಜಪ್ಪಗೌಡ ಇವರ ಮನೆ ಮತ್ತು ಸಂಗಪ್ಪಗೌಡ ಇವರ ಮನೆ ಇರುತ್ತದೆ.

ನಂತರ ಆರೋಪಿ ನಂ. 1 ಎರಡು ಕಡತಗಳನ್ನು ಹಾಜರುಪಡಿಸಿರುತ್ತಾರೆ. ಸದರಿ ಕಡತವನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಅದನ್ನು ನಿ.ಪಿ-2 ಎಂದು, ಸಾಕ್ಷಿ ಸಹಿಯನ್ನು ನಿ.ಪಿ-2(ಎ) ಎಂದು ಗುರುತಿಸಲಾಯಿತು. ಸದರಿ ಕಡತದ ಜೊತೆಗೆ ಕಾಮಗಾರಿ ದೃಡಿಕರಣ ಪ್ರಮಾಣ ಪತ್ರವನ್ನು ಹಾಜರುಪಡಿಸಿದ್ದು, ಅದನ್ನು ನಿ.ಪಿ-3 ಎಂದು, ಕೆಲಸ ಪೂರ್ಣಗೊಂಡ ಬಗ್ಗೆ ದೃಡಿಕರಣ ಪತ್ರವನ್ನು ಹಾಜರುಪಡಿಸಿದ್ದು, ಅದನ್ನು ನಿ.ಪಿ-4 ಎಂದು, ಅಂದಾಜು ವಹಿಯನ್ನು ಹಾಜರುಪಡಿಸಿದ್ದು, ಅದನ್ನು ನಿ.ಪಿ-5 ಎಂದು, ಕೂಲಿ ಕಾರ್ಮಿಕರು ಕೆಲಸಕ್ಕೆ ಹಾಜರಾದ

ಬಗ್ಗೆ ಹಾಜರಾತಿಯ ದಾಖಲೆಯನ್ನು (9 ಪುಟದಲ್ಲಿರುತ್ತದೆ) ಹಾಜರುಪಡಿಸಿದ್ದು, ಅದನ್ನು ನಿ.ಪಿ-6 ಎಂದು, ಸಾಮಗ್ರಿ ತರಿಸಿಕೊಂಡ ವಿವರವನ್ನು ಹಾಜರುಪಡಿಸಿದ್ದು, ಅದನ್ನು ನಿ.ಪಿ-7 ಎಂದು, ಕೂಲಿ ಕೆಲಸಕ್ಕಾಗಿ ನೇಮಿಸಿಕೊಂಡ ಕಾರ್ಮಿಕರ 7 ಪುಟಗಳ ಪಟ್ಟಿಯನ್ನು ಹಾಜರುಪಡಿಸಿದ್ದು, ಅದನ್ನು ನಿ.ಪಿ-8 ಎಂದು ಗುರುತಿಸಲಾಯಿತು.

ಈಗ 2010-11 ನೇ ಸಾಲಿನ ಖಾತ್ರಿ ಕ್ರೀಯಾ ಯೋಜನೆ ಕಡತವನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಅದನ್ನು ನಿ.ಪಿ-9 ಎಂದು, ಅದರಲ್ಲಿರುವ ಸಾಕ್ಷಿ ಸಹಿಯನ್ನು ನಿ.ಪಿ-9(ಎ) ಎಂದು ಗುರುತಿಸಲಾಯಿತು. ಸದರಿ ಕಡತದ ಜೊತೆಗೆ ಕಾಮಗಾರಿ ದೃಡಿಕರಣ ಪ್ರಮಾಣ ಪತ್ರವನ್ನು ಹಾಜರುಪಡಿಸಿದ್ದು, ಅದನ್ನು ನಿ.ಪಿ-10 ಎಂದು, ಕೆಲಸ ಪೂರ್ಣಗೊಂಡ ಬಗ್ಗೆ ದೃಡಿಕರಣ ಪತ್ರವನ್ನು ಹಾಜರುಪಡಿಸಿದ್ದು, ಅದನ್ನು ನಿ.ಪಿ-11 ಎಂದು, ಕೂಲಿ ಕಾರ್ಮಿಕರು ಕೆಲಸಕ್ಕೆ ಹಾಜರಾದ ಬಗ್ಗೆ ಹಾಜರಾತಿಯ ದಾಖಲೆಯನ್ನು (2 ಪುಟದಲ್ಲಿರುತ್ತದೆ) ಹಾಜರುಪಡಿಸಿದ್ದು, ಅದನ್ನು ನಿ.ಪಿ-12 ಎಂದು, ಬಿಲ್ಲ ನಂ. 6, ದಿ. 22.02.2011 ನೇದ್ದನ್ನು ಹಾಜರುಪಡಿಸಿದ್ದು, ಅದನ್ನು ನಿ.ಪಿ-13 ಎಂದು, ಬಿಲ್ಲ ನಂ. 7, ದಿ. 22.02.2011 ನೇದ್ದನ್ನು ಹಾಜರುಪಡಿಸಿದ್ದು, ಅದನ್ನು ನಿ.ಪಿ-14 ಎಂದು, ಅಂದಾಜು ವಹಿಯನ್ನು ಹಾಜರುಪಡಿಸಿದ್ದು, ಅದನ್ನು ನಿ.ಪಿ-15 ಎಂದು,  4 ಪುಟಗಳನ ಸಾಮಾನ್ಯ ವರದಿಯನ್ನು ಹಾಜರುಪಡಿಸಿದ್ದು, ಅದನ್ನು ನಿ.ಪಿ-16, ಕೂಲಿ ಕೆಲಸಕ್ಕಾಗಿ ನೇಮಿಸಿಕೊಂಡ ಕಾರ್ಮಿಕರ 2 ಪುಟಗಳ ಪಟ್ಟಿಯನ್ನು ಹಾಜರುಪಡಿಸಿದ್ದು, ಅದನ್ನು ನಿ.ಪಿ-17 ಎಂದು ಮತ್ತು ಕೆಲಸಕ್ಕೆ ವರದಿ ಮಾಡಿಕೊಳ್ಳುವುದಕ್ಕಾಗಿ 5 ಪುಟಗಳ ನೋಟಿಸ್ ಹಾಜರುಪಡಿಸಿದ್ದು, ಅದನ್ನು ನಿ.ಪಿ-18 ಎಂದು, ಕೆಲಸಕ್ಕೆ ಹಾಜರಾಗಲು ತಿಳುವಳಿಕೆ ನೋಟಿಸ್ ಪ್ರತ್ರವನ್ನು ಹಾಜರುಪಡಿಸಿದ್ದು, ಅದನ್ನು ನಿ.ಪಿ-19 ಎಂದು ಗುರುತಿಸಲಾಯಿತು.

ಈಗ ತೋರಿಸಲಾದ ಛಾಯಾಚಿತ್ರಗಳಲ್ಲಿ ಸಾಕ್ಷಿ ತಾನು ಇರುವುದನ್ನು ನೋಡಿ ಗುರುತಿಸಿದ್ದು, ಸದರಿ ಛಾಯಾಚಿತ್ರಗಳನ್ನು ನಿ.ಪಿ-20 ಎಂದು ಗುರುತಿಸಲಾಯಿತು. ಈಗ ತೋರಿಸಿದ ಫೋಟೊಗಳನ್ನು ಆರೋಪಿ ನಂ. 1 ಕಡತದ ಜೊತೆಗೆ ಒಟ್ಟಿರುತ್ತಾರೆ. ಸದರಿ 8 ಭಾವಚಿತ್ರಗಳನ್ನು ಒಟ್ಟಾಗಿ ನಿ.ಪಿ-21 ಎಂದು ಗುರುತಿಸಲಾಯಿತು. ಕಡತದ ಜೊತೆ ಟ್ರಾಕ್ಟರ ಇರುವ 6 ಭಾವಚಿತ್ರಗಳನ್ನು ಹಾಜರುಪಡಿಸಿದ್ದು, ಸದರಿ ಭಾವಚಿತ್ರಗಳನ್ನು ಒಟ್ಟಾಗಿ ನಿ.ಪಿ-22 ಎಂದು ಗುರುತಿಸಲಾಯಿತು. ಸದರಿ ಪಂಚನಾಮೆಯನ್ನು ಶಿವರಾಜಪ್ಪಗೌಡ ಇವರ ಮನೆ ಅಂಗಳದಲ್ಲಿ ಲ್ಯಾಪಟಾಪ್ ನಲ್ಲಿ ತಯಾರಿಸಿರುತ್ತಾರೆ. ಈ ಕುರಿತು ಚಾ.ಸಾ-37 ರವರು ನನ್ನ ಹೇಳಿಕೆಯನ್ನು ಪಡೆದಿರುತ್ತಾರೆ.

**ಪಾಟೀ ಸವಾಲು : ಆರೋಪಿ ನಂ. 1 ಪರ ವಕೀಲರಿಂದ**

ನಾನು ದೇವದುರ್ಗದಲ್ಲಿ ವಾಸಿಸುತ್ತಿದ್ದೇನೆ. ಮಣ್ಣಿನ ಕಾಮಗಾರಿ ಮತ್ತು ಸಿಮೆಂಟ್ ಕಾಮಗಾರಿ ಕೆಲಸ ಬೇರೆ ಬೇರೆ ಇರುತ್ತದೆ. ಮಣ್ಣಿನ ಕಾಮಗಾರಿ ಕೆಲಸ ಮುಗಿದ 4 ವರ್ಷಗಳ ನಂತರ ಪಂಚನಾಮೆ ಮಾಡಲು ಹೋಗಿದ್ದೇವು. ಆ ವೇಳೆಯಲ್ಲಿ ಪ್ರವಾಹ ಬಂದು ಮತ್ತು ಮಳೆ ಬಂದು ಮಣ್ಣಿನ ಕಾಮಗಾರಿ ಕೆಲಸ ಮುಳುಗಿ ಹೋಗಿತ್ತು ಎಂದರೆ ಸರಿ. ನಾವು ಅಳತೆ ಮಾಡಲುಹೋದಾಗ ಮಣ್ಣಿನ ಕಾಮಗಾರಿ ಕೆಲಸ ಪ್ರವಾಹ ಮತ್ತು ಮಳೆಯಿಂದ ಮುಳುಗಿ ಹೋಗಿತ್ತು. ಕ್ರಿಯಾ ಯೋಜನೆಯನ್ನು ನಮ್ಮ ಸಮಕ್ಷಮ ಮಾಡಿರುವುದಿಲ್ಲ. ಸದರಿ ಕ್ರಿಯಾ ಯೋಜನಯನ್ನು ಎಲ್ಲಿ ಮತ್ತು ಹೇಗೆ ಮಾಡಿದರು ಎಂದು ನನಗೆ ಮಾಹಿತಿ ಇಲ್ಲ. ನಾನು ಹೋದ ಸಮಯದಲ್ಲಿ ಎಲ್ಲ ಕಾಮಗಾರಿ ಕೆಲಸ ಮುಗಿದ್ದಿದ್ದವು ಎಂದು ಹೇಳಿದ್ದರು. ಆ ಕಾಲಕ್ಕೆ ಎಲ್ಲ ಕಾಮಗಾರಿ ಮುಗಿದಿದೆ ಎಂದು ದೃಡಿಕರಣ ಪತ್ರ ಕೊಟ್ಟಿದ್ದರು ಎಂದರೆ ಸರಿ. ಸದರಿ ಕಾಮಗಾರಿಯಲ್ಲಿ ಎಷ್ಟು ಜನ ಕೂಲಿಗಾರರು ಎಂದು ಮತ್ತು ಎಷ್ಟು ಕೂಲಿ ಕೆಲಸ ಮಾಡಿದ್ದಾರೆ ಎಂದು ನನಗೆ ಗೊತ್ತಿಲ್ಲ. ಅದೇ ರೀತಿ ಜಾಬ್ ಕಾರ್ಡಿನಲ್ಲಿ ಒಟ್ಟು ಎಷ್ಟು ಜನ ಅರ್ಜಿದಾರರು ಇದ್ದರು ಎಂದು ನನಗೆ ಹೇಳಲು ಆಗುವುದಿಲ್ಲ. ಪ್ರತಿಯೊಂದು ಕಾಮಗಾರಿ ಕೆಲಸ ಮಾಡಿದ ಸ್ಥಳಗಳ ಚೆಕ್ಕಬಂದಿ ಹೇಳಲು ಆಗುವುದಿಲ್ಲ. ಸಾಮಗ್ರಿ ವೆಚ್ಚದ ಬಿಲ್ಲುಗಳಲ್ಲಿ ಎನು ವ್ಯತ್ಯಾಸ ಇದೆ ಎಂದು ನನಗೆ ಹೇಳಲು ಆಗುವುದಿಲ್ಲ.

ವೆಂಕಟೇಷ ಗಲಗ ಈತನೇ ಕಾಮಗಾರಿಗಳ ಅನುಷ್ಠಾನದ ಬಗ್ಗೆ ಹೇಳಿರುತ್ತಾನೆ, ಆದರೆ ಆರೋಪಿ ನಂ. 1 ಹೇಳಿರುವುದಿಲ್ಲ.

ಈ ಹಂತದಲ್ಲಿ ಆರೋಪಿ ನಂ. 1 ಪರ ವಕೀಲರು ಮುಂದುವರೆದ ಪಾಟೀ ಸವಾಲು ಮಾಡಲು ಕಾಲಾವಕಾಶ ಕೋರಿದ್ದು, ಅನುಮತಿಸಲಾಯಿತು.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ. ಹೇ. ಕೇ. ಸರಿ. ಇದೆ

ಎರಡನೇ ಹೆಚ್ಚುವರಿ ಸತ್ರ ನ್ಯಾಯಾಧೀಶರು,
ರಾಯಚೂರು.